ಸಾಯದಿರುತ್ತಿದ್ದರೆ ಬಹುಶಃ ಇಂತಹ ಕ್ಲಿಷ್ಟವಾದ ಯೋಚನೆಯೊಂದು ನನ್ನಲ್ಲಿ ಅಂಕುರಿಸಿ ಗುಂಗಾಗತೊಡಗುತ್ತಿರಲಿಲ್ಲವೆಂಬ ಅನುಮಾನಕ್ಕೆ ಆಸ್ಪದ ಕೊಡುವ ನನ್ನ ಸಂಕೀರ್ಣ ಕಲ್ಪನೆಯ ಸಂಕ್ರಮಣತೆಯ ಬಗ್ಗೆಯೇ ಕಸಿವಿಸಿಯಾಗುತ್ತದೆ. ಇಷ್ಟಕ್ಕೂ ಈ ದಿವಾಕರ ಯಾರು? ಅವನಿಗೂ ನನಗೂ ಯಾವ ಸಂಬಂಧ? ಎನ್ನುವ ಪ್ರಶ್ನೆಗಳೊಂದಿಗೆ ನನಗೆ ನಾನೇ ಪ್ರಶ್ನೆಯಾಗುತ್ತೇನೆ. ಅಥವಾ ದಿವಾಕರನೇ ನನ್ನೆಲ್ಲ ಅನ್ನಿಸಿಕೆ, ಅವಗತಿಗೆ ಪ್ರಶ್ನೆಯಾಗಿ ನಿಂತು ನನ್ನ ಲೇಖನಿಗಿಷ್ಟು ತ್ರಾಸದ ಕಾಳಜಿಯನ್ನು ಕಾರುವಷ್ಟು ಸಮರ್ಥ ಅಭಿವ್ಯಕ್ತಿಯಾಗುತ್ತಾನೆಂದು ನಾನೆಂದೂ ಎಣಿಸಿರಲಿಲ್ಲ ಕೂಡ.

ಹಾಗೆ ನೋಡಿದರೆ ದಿವಾಕರನ ಸಾವು ಸಾವೇ ಅಲ್ಲವೆಂದು ನನ್ನ ಭಾವನೆ. ತುಂಬು ಲವಲವಿಕೆಯಿಂದಿದ್ದ, ಆರ್ಥಿಕವಾ ಗಿ ಸುಭದ್ರವಾಗಿದ್ದ, ಉತ್ಸಾಹದಿಂದಿದ್ದ ಮನುಷ್ಯ ಆತ್ಮಹತ್ಯೆ ಎಂಬ ಭ್ರಮೆಗೊಳಗಾಗಿ ಸಾವಿನ ಅನಿಶ್ಚಿತ ಲಕ್ಷಣಕ್ಕೆ ಉದಾಹರಣೆಯಾಗಿದ್ದು ಆಶ್ಚರ್ಯಕರವಾದ ಸಂಗತಿ ನನ್ನ ಮಟ್ಟಿಗೆ. ದಿವಾಕರನ ಸಾವಿನಿಂದ ನನಗೆ ಯಾವುದೇ ವೈಯಕ್ತಿಕ ನಷ್ಟವಾಗಿರದಿದ್ದರೂ, ತುಂಬಾ ತಳಮಳಕ್ಕೆ ದುಗುಡಕ್ಕೆ ಮತ್ತು ಯೋಚನೆಗೆ ಒಳಗಾಗಿದ್ದೆನೆಂದು ಹೇಳಿಕೊಳ್ಳುವುದರಿಂದ ನನಗೆ ಯಾವುದೇ ಅಡ್ಡಿ ಉಂಟಾಗುವುದಿಲ್ಲ. ದಿವಾಕರ ಸತ್ತ ವಿಷಯ ಮೊದಲು ಆಶ್ಚರ್ಯದ ಸಂಗತಿಯಾಗಿ ನಂತರ ಗಾಂಭೀರ್ಯವನ್ನು ರೂಪಿಸಿಕೊಂಡಿದ್ದರಿಂದಲೇ ಅವನ ಆತ್ಮಹತ್ಯೆಯ ಬಗ್ಗೆ ಕುತೂಹಲವನ್ನು ಹುಟ್ಟಿಸಿಕೊಂಡಿದ್ದು.

ದಿವಾಕರ ಸತ್ತ ದಿನ 'ದಿವಾಕರ ಆತ್ಮಹತ್ಯೆ ಮಾಡಿಕೊಂಡು ಸಾಯಲಿಲ್ಲ. ಅವನದು ವಾಸ್ತವ ಸಾವು' ಎಂದು ಸಾಬೀತು ಮಾಡಲು ನಾನು ಬಹಳಷ್ಟು ಹೆಣಗಾಡಿದ್ದೇಕೆ? ಬಹುಶಃ ಈ ಪ್ರಯತ್ನಕ್ಕೆ ಪೂರಕವಾದ ಅಂಶಗಳು ಮೊಳಕೆಯೊಡೆಯಲು ಅವನ ಬಗ್ಗೆ ನಾನು ಕಲ್ಪಿಸಿಕೊಂಡಿದ್ದೋ ಅಥವಾ ಅವನ ನಡವಳಿಕೆಗಳೇ ಕಾರಣವೆನ್ನಬಹುದು. ನಾನು ಹಾಗೆ ಸಾಬೀತು ಮಾಡಲು ಪ್ರಯತ್ನಿಸಿ... ಎಲ್ಲರ ಎದುರಿನಲ್ಲಿಯೂ ಪೊಳ್ಳಾಗಲು ಕಾರಣ ಅವನ ತಲೆದಿಂಬಿನ ಪಕ್ಕದಲ್ಲಿಯೇ ಇದ್ದ ನಿದ್ರೆಗುಳಿಗೆಗಳ ಸೀಶೆ! ಹಾಸಿಗೆಯ ಮೇಲೆ ಬೋರಲಾಗಿ ಬಿದ್ದಿದ್ದ ಅವನ ತಲೆಯ ಪಕ್ಕದಲ್ಲೇ ಇದ್ದ ನಿದ್ರೆಮಾತ್ರೆಗಳ ಸೀಶೆ ನನ್ನನ್ನು ನೋಡಿ ಕಿಸಕ್ಕನೆ ನಕ್ಕು ಗೇಲಿಮಾಡುವಂತೆ ಭಾಸವಾದಾಗ, ಅದನ್ನೆತ್ತಿ ಕಿಟಕಿಯಾಚೆಗೆ ಬಿಸಾಡಿ ನಾನೇ ಗೇಲಿಯಾಗಿದ್ದೆ. ನನ್ನ ಈ ವಿಚಿತ್ರ ವರ್ತನೆ ಆಶ್ಚರ್ಯದ ಸಂಗತಿಯೇ ಆಗಿತ್ತು. ಅಲ್ಲಿ ನೆರೆದಿದ್ದ ಹಿರಿಯರೊಬ್ಬರು ಹೇಳಿದ್ದರು: 'ಅಲ್ರಿ, ಆ ಮಾತ್ರೆಗಳ ಮೇಲೆ ಯಾಕೆ ಕೋಪ ತೋರಿಸ್ತೀರಾ. ಪಾಪ ನಿಮ್ಮ ಸ್ನೇಹಿತನ್ನ ನುಂಗು ಅಂತ ಅವು ಬಲವಂತ ಪಡಿಸಿದ್ವೆ. ನಮ್ಮಲ್ಲಿ ಸೆಲ್ಫ್ ಕಂಟ್ರೋಲ್ ಇರ್ಬೇಕು. ಸಂಯಮ ಮೀರ್ದೋನು ಜಡವಸ್ತುಗೆ ಸಮ.' ಸಾವು ಕೆಲವರಿಗೆ ಇಷ್ಟವಾದ ವಸ್ತು ಎಂಬ ಸತ್ಯ ನನಗೆ ಫ್ಲಾಶ್ ಆದದ್ದು ಆವಾಗಲೇ. ಸೀಶೆಯ ಪಕ್ಕದಲ್ಲಿಯೇ ಒಂದು ಪತ್ರ. ಆತುರದಿಂದ ಬಿಡಿಸಿನೋಡಿದ್ದೆ. ನನಗಾಗಿ ಬರೆದಿದ್ದ ಮೂರ್ನಾಲ್ಕು ಸಾಲುಗಳ ಪತ್ರ ಅದು. 'ಪ್ರಿಯ ಚಂದ್ರು, ನನ್ನ ವಿಚಿತ್ರ ಸಾವಿನಿಂದ ನಿಮಗೆ ಆಶ್ಚರ್ಯವಾಗಿರಬಹುದು. ಹಠಾತ್ತನೆ ಈ ತೀರ್ಮಾನಕ್ಕೆ ಬಂದುದರಿಂದ ನಾನು ಹೆಚ್ಚಿನದೇನೂ ಬರೆಯುತ್ತಿಲ್ಲ. ಸಾಯುತ್ತಿರುವವನು ಅಥವಾ ಸತ್ತವನು ಏನು ಬರೆದರೆ ತಾನೆ ಪ್ರಯೋಜನ. ನನ್ನ ಸಾವಿನಿಂದ ಮಿತ್ರನೆನಿಸಿಕೊಂಡ ನಿಮಗೆ ಸ್ವಲ್ಪ ತೊಂದರೆಯಾಗಬಹುದು. ಅದನ್ನು ಭರಿಸುವ ಸಂಯಮ ನಿಮಗಿದೆಯೆಂದು ನನಗೆ ಗೊತ್ತು.' ಈ ಮೊಟುಕಾದ ಪತ್ರದಿಂದಲೇ ದಿವಾಕರನ ಸಾವಿನೊಳಕ್ಕೆ ನಾನು ಸಿಲುಕಿಕೊಂಡದ್ದು... ನನಗೂ ದಿವಾಕರನಿಗೂ ಅವನು ಸತ್ತ ನಂತರ ಹೆಚ್ಚಿನ ಸಂಬಂಧಗಳು ಬೆಳೆಯುತ್ತಾ ಹೋದದ್ದು.